


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25



Rtn. CA Dev Anand, District Governor 2024-25 | Rtn. K. Sooryanarayana Udpa, President, Mob: 99009 66114 | Rtn. N.G. Usha, Secretary, Mob : 81975 92278 | Rtn. M. Madhavachar, Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204



ಸಂಪುಟ – 67 ಸಂಚಿಕೆ –29 ದಿನಾಂಕ : 29–01–2025


## ದಿನಾಂಕ: 29.01.2025 ರ ವಾರದ ಸಭೆಯ ವರದಿ

**2024–25 ಸಾಲಿನ 7ನೇ ಕೌಟುಂಬಿಕ ಸ್ನೇಹಮಿಲನ ಕಾರ್ಯಕ್ರಮ ದಿನಾಂಕ:29.01.2025ರಂದು ವಿಶಿಷ್ಟವಾಗಿ ನಡೆಯಿತು. ಅಂದು ಖ್ಯಾತ ಮನೋವೈದ್ಯರು ಹಾಗೂ ನೃತ್ಯ ಪಟು ವಿಧುಷಿ ಡಾ.ಪವಿತ್ರರವರು ಮಾತೃಭೂಮಿ ಹಾಗೂ ತಾಯಿಯ ಮಮತೆಯ ಬಗೆಗಿನ ತಮ್ಮ ವಿಶೇಷ ನೃತ್ಯದಿಂದ ಸರ್ವರ ಮೆಚ್ಚುಗೆಗೆ ಪಾತ್ರರಾದರು. ಅಂದು ಮೂರುಜನ ಸಾಧಕರನ್ನು ರೋಟರಿಯ ವೃತ್ತಿ ಸೇವಾ ಮಾಸಾಚರಣೆ ಅಂಗವಾಗಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಅಂದು ವೇದಿಕೆಯಲ್ಲಿ ಡಾ॥ ಪವಿತ್ರ, ಕ್ಲಬ್ ಅಧ್ಯಕ್ಷರಾದ ರೊ. ಕೆ.ಸೂರ್ಯ ನಾರಾಯಣ ಉಡುಪ ಮತ್ತು ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವೇದಿಕೆಯಲ್ಲಿದ್ದು ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.**














ಅಂದಿನ ಸಭೆಯ ಪ್ರಾರಂಭವು ರೊ.ಸುಮಲತಾ ಭೂಪಾಳಂ ರವರು **"ನಾನಿರಲಿ ಇಲ್ಲದಿರಲಿ ನನ್ನ ಭಾರತ ಬೆಳಗುತಿರಲಿ"** ಎಂಬ ಗೀತೆಯೊಂದಿಗೆ ಸೊಗಸಾದ ಪ್ರಾರ್ಥನೆಯೊಂದಿಗೆ ಸಭೆ ಪ್ರಾರಂಭವಾಯಿತು. ಮಾಜಿ ಅಧ್ಯಕ್ಷ ರೊ. ವೈ. ಗೋಪಾಲಕೃಷ್ಣ ಗುಪ್ತರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊಎನ್.ಜಿ. ಉಷಾರವರು ಪ್ರಕಟಣೆ ಹಾಗೂ ಹುಟ್ಟು ಹಬ್ಬದ ಶುಭಾಶಯ ಕೋರಿದರು.

**ಸಾಧಕರಿಗೆ ಸನ್ಮಾನ : ವೃತ್ತಿ ಸೇವಾ ಮಾಸಾಚರಣೆ ಅಂಗವಾಗಿ ಈ ಕೆಳಕಂಡ ಸಾಧಕರನ್ನುಗುರುತಿಸಿ ನಮ್ಮ ಈ ರೋಟರಿ ಸಭೆಯಲ್ಲಿ ಸನ್ಮಾನಿಸಲಾಯಿತು.**

ಡಾ. ಕೃಷ್ಣ ಭಟ್ಟರು, ಫಿಜಿಶಿಯನ್, ಭದ್ರಾವತಿ – ಇವರನ್ನು ಪರಿಚಯಿಸಿದವರು ರೊ. ವೈ.ವಿ.ವೆಂಕಟರಮಣ ಜೋಯ್ಸರವರು. ಡಾ. ಸಂಧ್ಯಾಕಾವೇರಿ, ಪ್ರಾಂಶುಪಾಲರು, ಮಾನಸ ಟ್ರಸ್ಟಿನ ಕಟೀಲ್ ಅಶೋಕ್ ಪೈ ಸ್ಮಾರಕ ಕಾಲೇಜು. ಶಿವಮೊಗ್ಗ – ಇವರನ್ನು ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಕಿಶೋರ್ ಶೀರನಾಳಿಯವರು ಪರಿಚಯಿಸಿದರು.

ಶ್ರೀ ಅನಿಲ್ ಕುಮಾರ್ ಭೂಮರೆಡ್ಡಿ , ಹೆಚ್ಚುವರಿ ಪೋಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ– ಇವರನ್ನು ಮಾಜಿ ಅಧ್ಯಕ್ಷ ರೊ.ಎನ್.ವಿ.ಭಟ್‌ರವರು ಪರಿಚಯ ಮಾಡಿದರು.

ಇವರುಗಳನ್ನು ರೊ.ವೈ.ವಿ.ವೆಂಕಟರಮಣ ಜೋಯ್ಸ್, ರೊ.ಕಿಶೋರ್ ಶೀರನಾಳಿ, ರೊ.ಅನುರಾಧಾ ಶೀರ್ನಾಳಿ ರೊ.ರಮಾ ಗೋಪಾಲ್, ರೊ. ಎನ್.ವಿ.ಭಟ್, ರೊ. ಭಾರ್ಗವಿ ಭಟ್

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ: 05–02–2025, ಬುಧವಾರ ಸಂಜೆ 6:45**

# ಕ್ಲಬ್ ಅಫೇರ್ಸ್
# CLUB AFFAIRS

**ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ**

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ












ರೊ.ಟಿ.ಆರ್.ಅಶ್ವಥ ನಾರಾಯಣ, ರೊ.ಸುಮಲತಾ ಭೂಪಾಳಂ ಇವರುಗಳೆಲ್ಲಾ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳೊಂದಿಗೆ ಸೇರಿ ಸನ್ಮಾನಿಸಿದರು.

**ಸನ್ಮಾನಿತರ ಮಾತುಗಳು:**

ಮೊದಲಿಗೆ ಡಾ.ಕೃಷ್ಣ ಭಟ್ಟರು ಮಾತನಾಡಿ, ಮೊದಲು ನಮಗೆ ಚಪ್ಪಾಳೆ ಬೇಕಿತ್ತು. ಈಗ ಮೌನಬೇಕಾಗಿದೆ. ಸನ್ಮಾನ ಮಾಡಿದ್ದು ಸಂತೋಷವಾಗಿದ್ದು, ಇನ್ನೂ ಹೆಚ್ಚು ಸೇವೆಯನ್ನು ಮಾಡಲು ಪ್ರೇರಪಣೆಯಾಗಿದೆ. ಜೀವನದಲ್ಲಿ ಕೃತಜ್ಞತೆ ಮತ್ತು ಜವಾಬ್ದಾರಿ ಮುಖ್ಯವಾದದ್ದು. ರೋಟರಿಯಂಥಹ ಸೇವಾ ಸಂಸ್ಥೆಗಳಲ್ಲಿ ಯಾರು ಸಮಾಜಕ್ಕೆ ಹೆಚ್ಚಿನ ಸೇವೆ ಮಾಡುತ್ತಿರುತ್ತಾರೊ ಅವರನ್ನು ಗುರುತಿಸಿ ಗೌರವಿಸುತ್ತಾರೆ. ನಮ್ಮನ್ನು ಕರೆಸಿ ಗೌರವಿಸಿದ್ದೀರಿ ಅದಕ್ಕೆ ನಾನು ಚಿರಋಣಿ ಎಂದರು.

ಎರಡನೆಯದಾಗಿ ಡಾ.ಸಂಧ್ಯಾ ಕಾವೇರಿಯವರು ಮಾತನಾಡಿ, ಈ ಸನ್ಮಾನಕ್ಕೆ ನಾನು ಅರ್ಹಳೇ ಎಂಬುದು ಪ್ರಶ್ನೆಯಾಗಿದೆ. ಡಾ. ಕೃಷ್ಣ ಭಟ್ಟರವರಿಗೆ ಅಭಿನಂದನೆ ತಿಳಿಸಿದರು. ನಾನು ಸೇವೆ ಮಾಡುತ್ತಿರುವ ಕಾಲೇಜಿನ ಹೆಸರು ಹೇಳಿದ್ದಕ್ಕೆ ವಂದನೆಗಳು ಎಂದರು. ಈ ಕಾಲೇಜು ನನ್ನನ್ನು ಪೋಷಿಸಿದ ಸಂಸ್ಥೆ. ನಾನು ಬೇರೆಬೇರೆ ಕ್ಷೇತ್ರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಸಂಸ್ಥೆ. ಈ ಕ್ಲಬ್‌ನಿಂದ ಜಿ.ಎಸ್.ಇ ಟೀಂ.ಗೆ ನನ್ನನ್ನು ಗುರುತಿಸಿ ನ್ಯೂಜಿಲೆಂಡ್‌ಗೆ ತೆರಳಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ಈ ಕ್ಲಬ್‌ಗೆ ನಾನು ಚಿರಋಣಿಯಾಗಿದ್ದೇನೆ. ಡಾ.ರಜನಿ ಮೇಡಂಗೆ ಮತ್ತು ಲೇಟ್ ಡಾ. ಅಶೋಕ್ ಪೈರವರ ಸಹಕಾರವನ್ನು ನೆನೆದಅವರು ಈ ಸನ್ಮಾನವೆಲ್ಲವೂ ಅವರಿಗೆ ಸಲ್ಲುತ್ತದೆ ಎಂದರು.

ಮೂರನೆದಾಗಿ ಮಾತನಾಡಿದ ಶ್ರೀ ಅನಿಲ್ ಕುಮಾರ್ ಭೂಮರೆಡ್ಡಿಯವರು, ಬಹಳ ಸಂತೋಷವಾಯಿತು. ಸುಮಾರು 30 ವರ್ಷಗಳ ಕಾಲ ವಿವಿಧ ಹುದ್ದೆಯಲ್ಲಿ, ವಿವಿಧ ಊರುಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ಈ ಸಮಾಜದ ಅವಿಭಾಜ್ಯ ಅಂಗವಾಗಿ ಕೆಲಸ ಮಾಡಿದ್ದೇನೆ. ನಮ್ಮ ಮುತ್ತಜ್ಜ ಬಸಪ್ಪ ವೆಂಕಪ್ಪ ಭೂಮರೆಡ್ಡಿಯವರು ಹಲವಾರು ದೇಣಿಗೆಗಳನ್ನು ನೀಡಿ ಹೆಸರುವಾಸಿಯಾಗಿದ್ದಾರೆ. ಅಂಥಹ ಮನೆತನದಿಂದ ಬಂದ ನಾನು, ಸಮಾಜ ಸೇವೆ ಮಾಡಬೇಕು. ಪ್ರಾಮಾಣಿಕನಾಗಿರಬೇಕು. ಜನಾನುರಾಗಿಯಾಗಿರಬೇಕು ಎಂದು ಕೆಲಸ ನಿರ್ವಹಿಸಿದ್ದೇನೆ. ಸರ್ಕಾರಿ ಕೆಲಸವನ್ನು ಮಾಡುವುದು ಸುಲಭವಲ್ಲ. ಈ ಸಮಾಜ ನನಗೆ ನೀಡಿದ್ದನ್ನು ಸಮಾಜಕ್ಕೆ ನೀಡುತ್ತಿದ್ದೇನೆ. ಈ ಎಲ್ಲಾ ಹೊಣೆಗಾರಿಕೆ ನನ್ನ ಮೇಲೆ ಇರುವಾಗ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಕಾಪಾಡಲು ಇಲಾಖೆಗೆ ಒಳ್ಳೆ ಹೆಸರು ತರಲು ಶ್ರಮಿಸುತ್ತೇನೆ. ಈ ಮಣ್ಣಿನ ಗುಣವೇ ಹಾಗೇ. ಇಲ್ಲಿನ ಸಾಹಿತ್ಯ, ಸಂಗೀತ, ನಾಟಕ, ಯಕ್ಷಗಾನ ಕಲೆಗೆ ಮಾರುಹೋಗಿದ್ದು, ನನ್ನ ಪತ್ನಿಯೂ ಯಕ್ಷಗಾನ ಕಲೆಯಲ್ಲಿ ಭಾಗವಹಿಸುತ್ತಾರೆ. ಸಮಾಜದ ಸುಖಕ್ಕಾಗಿ ಕೆಲಸ ಮಾಡುತ್ತಿರುವುದರಿಂದ ಮನ್ನಣೆ ದೊರಕುತ್ತಿದೆ ಎಂದರು.

ಮುಖ್ಯ ಅತಿಥಿಗಳಾದ ಡಾ.ಪವಿತ್ರರವರನ್ನು ರೊ.ಭಾರ್ಗವಿ ಭಟ್‌ರವರು ಪರಿಚಯ ಮಾಡಿದರು. ಡಾ ಪವಿತ್ರರವರು ದೇವೀ ಸ್ತುತಿಯೊಂದಿಗೆ ತಮ್ಮ ನೃತ್ಯವನ್ನಾರಂಭಿಸಿದರು. ಅವರು ಮಾತನಾಡುತ್ತಾ ನಾನು ಮನೋವೈದ್ಯಳಾಗುವುದಕ್ಕಿನ್ನ ಮೊದಲು ನಾನೊಬ್ಬ ಕಲಾವಿದೆ. ಇಂದು ನಾನು ಮಾತೃಭೂಮಿಯ ಪರಿಕಲ್ಪನೆಯೊಂದಿಗೆ ಕಾರ್ಯಕ್ರಮವನ್ನು ನೀಡುತ್ತಿದ್ದೇನೆ. ಆದಿ ಶಂಕರರ ಮಾತು “ಕೆಟ್ಟಮಕ್ಕಳಿರಬಹುದು ಆದರೆ ಕೆಟ್ಟ ತಾಯಿ ಇರುವುದಿಲ್ಲ.” ಮಾತೃ ಸಂಪನ್ಮೂಲದಿಂದ ಚೆನ್ನಾಗಿರುವ ದೇಶ ನಮ್ಮದು. ಕುಟುಂಬ ಸಮಾಜದ ಒಂದು ಘಟಕ. ಇಲ್ಲಿ ನಮ್ಮ ಸಂಸ್ಕೃತಿ, ನಡೆ ನುಡಿಗಳನ್ನು ನಮ್ಮ ಸುತ್ತಮುತ್ತಲಿನ ಜನರಿಗೆ ಎಷ್ಟು ತಲುಪಿಸುತ್ತೀವೆ ಎನ್ನುವುದು ಮುಖ್ಯವಾಗುತ್ತದೆ.

ದ.ರಾ ಬೇಂದ್ರಯವರಕವನದ ಬಗ್ಗೆ ಅದರಲ್ಲೂ ತಾಯಿಯ ಬಗ್ಗೆ ಭಾರತ ಮಾತೆಯ ಬಗ್ಗೆ ನೃತ್ಯದ ಮೂಲಕ ಪ್ರಸ್ತುತ ಪಡಿಸಿದರು. ರೂಪ ಹಾಸನರವರ ಆಧುನಿಕ ಕವಿತೆ – ಬೆಣ್ಣೆ ಮಾಡುವ ಕಾಯಕ ಮತ್ತು ಅದರ ಕಷ್ಟಗಳ ಬಗ್ಗೆ ಹಾಗೂ ತುಪ್ಪ ಆಗುವ ಪ್ರಕ್ರಿಯೆಗೆ ಬೆಳಕು ಚೆಲ್ಲುವ ನೃತ್ಯವನ್ನು ಮಾಡಿದರು. ಭಾವನಾತ್ಮಕ ಪ್ರಕ್ರಿಯೆಯಲ್ಲಿ ಮಾತೃತ್ವ ಒಂದು ಗುಣ. ಇವನ್ನುತಾಯಿಯಲ್ಲಿ ನೋಡಬಹುದು. ದೇಶದಲ್ಲಿ ಸಂಕಷ್ಟಗೊಳಗೊದಗಿದಾಗ ಅವುಗಳನ್ನು ಸರಿಪಡಿಸುವ ಉಪಾಯವನ್ನು ಕಾಲ ಕಾಲಕ್ಕೆ ಕಂಡುಕೊಳ್ಳಬೇಕು. ಪರಿವರ್ತನೆ ಜಗದ ನಿಯಮ. ಮತ್ತೊಬ್ಬರನ್ನು ಗೌರವಿಸಬೇಕು. ಜೀವನದ ಮೌಲ್ಯಗಳನ್ನು ಕಾಪಾಡಬೇಕು ಎಂದು ತಿಳಿಸಿ. ಕುವೆಂಪುರವರ ರಾಮಾಯಣ ದರ್ಶನಂನ ನೃತ್ಯವೊಂದನ್ನು ಪ್ರಸ್ತುತಪಡಿಸಿದರು.

ರಾಮಾಯಣಂ ದರ್ಶನದಲ್ಲಿ ಜೀವನಕ್ಕೆ ಮೌಲ್ಯ ಹಾಗೂ ಸಂದೇಶವನ್ನು ನೀಡಲಾಗಿದೆ. ಈ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಬಂದು 50 ವರ್ಷಗಳಾಗಿವೆ. ಇಲ್ಲಿ ದುಷ್ಟ ಶಿಕ್ಷಣ ಮತ್ತು ಶಿಷ್ಟರಕ್ಷಣೆಯಾಗಿರುವುದು ಕವಿ ಈ ದೇಶವನ್ನು, ಸಮಾಜವನ್ನು ಪರಿವರ್ತನೆಯನ್ನು ಮಾಡಬಹುದು ಎಂಬುದನ್ನು ತೋರಿಸಿದ್ದಾರೆ. ಕಳ್ಳನಾದಂತಹ ವಾಲ್ಮೀಕಿ ಮುನಿಯಾಗಿ





ಬದಲಾದುದನ್ನು ಕಲ್ಕತ್ತಾದಂತಹ ಜೈಲಿನಲ್ಲಿ ಪ್ರದರ್ಶಿಸಲಾಗಿದೆ ಎಂದರು. ಒಬ್ಬ ಜವಾಬ್ದಾರಿಯುತ ನಾಗರೀಕನಾದವನು ಆತ್ಮ ಸಾಕ್ಷಿಎನ್ನುವುದನ್ನು ಪಾಲಿಸಲೇಬೇಕು. ನಮ್ಮದೇ ಹೆದರಿಕೆ ನಮಗಿರಬೇಕು ಎನ್ನುತ್ತಾ ಕೊನೆಯಲ್ಲಿ ಡಿವಿಜಿಯವರ ಕವಿತೆಯ ನೃತ್ಯವನ್ನು ಪ್ರಸ್ತುತ ಪಡಿಸಿದರು.

ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಇಂದಿನ ಸಮಾರಂಭದಲ್ಲಿ ಡಾ.ಪವಿತ್ರಾರವರ ನೃತ್ತ ಪ್ರದರ್ಶನ ಮನಮುಟ್ಟುವಂತಹುದು ಅದರಂತೆ ಅವರ ಮಾತುಗಳೂ ಸಹ ಎಂದರು.

ಇದೇ ಸಂದರ್ಭದಲ್ಲಿ ಈ ತಿಂಗಳಲ್ಲಿ ತಮ್ಮ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡ ರೊ.ಶೈಲಿನ್ ಮತ್ತು ಶೀಲಾರವರನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಲಾಯಿತು. ಎಂದನಂತೆ ಅವರುಗಳು ಪರಸ್ಪರ ಮಾಲೆ ಬದಲಾಯಿಸಿಕೊಳ್ಳುವುದರ ಮೂಲಕ ತಮ್ಮ ವಿವಾಹ ವಾರ್ಷಿಕೋತ್ಸವವನ್ನುಆಚರಿಸಿ ಸಂಭ್ರಮಿಸಿದರು.

ಡಾ. ಪವಿತ್ರರವರಿಗೆ ಡಾ.ಉಷಾ ಪ್ರಭು, ಶ್ರೀಮತಿ ರಂಜಿನಿ ದತ್ತಾತ್ರಿ, ಡಾ.ಸಂಧ್ಯಾಕಾವೇರಿ, ರೊ.ಅನುರಾಧಾ ಶೀರನಾಳಿ, ರೊ ಶೈಲಿನ್ ಅಧ್ಯಕ್ಷರು ಮತ್ತು ಕಾರ್ಯದರ್ಶಿ ಮುಂತಾದವರು ಸೇರಿ ಅಭಿನಂದಿಸಿದರು.

ಕೊನೆಯಲ್ಲಿ ಕಾರ್ಯದರ್ಶಿ ರೊ.ಎನ್.ಜಿ. ಉಷಾರವರು ವಂದಿಸಿದರು. ರಾಷ್ಟ್ರಗೀತೆಯ ನಂತರ ರೊ. ವೈ.ವಿ.ವೆಂಕಟರಮಣ ಜೋಯ್ಸ ಮತ್ತು ಶ್ರೀಮತಿ ರಂಜಿನಿ ದತ್ತಾತ್ರಿಯವರ ಭಾರತ ಮಾತಾಕಿ ಜೈ ಉದ್ಘೋಷದೊಂದಿಗೆ ಸಭೆ ಸಂಪನ್ನಗೊಂಡಿತು. ಕಾರ್ಯಕ್ರಮದ ನಂತರ ಪುಷ್ಕಳ ಭೋಜನ ಏರ್ಪಾಡಾಗಿತ್ತು. ❖

**ದಿನಾಂಕ: 29.01.2025 ರಂದು ವೃತ್ತಿ ಸೇವಾ ಮಾಸಾಚರಣೆ ಅಂಗವಾಗಿ ಸನ್ಮಾನಿಸಲ್ಪಟ್ಟ ವೃತ್ತಿ ಪರಿಣಿತರ ಕಿರು ಪರಿಚಯ:**

**ಡಾ. ಕೃಷ್ಣ ಭಟ್:** ಫಿಜಿಶಿಯನ್, ಹೊನ್ನಾವರ ತಾಲೂಕಿನ ಹಡಿನ ಭಾಳ ಗ್ರಾಮದವರಾದ ಡಾ.ಎಸ್. ಕೃಷ್ಣಭಟ್ ತಮ್ಮ ವೈದ್ಯಕೀಯ ವಿದ್ಯಾಭ್ಯಾಸವನ್ನು ಧಾರವಾಡ ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ಪೂರೈಸಿದರು. ಭದ್ರಾವತಿಯಲ್ಲಿ ಕಳೆದ 50 ವರ್ಷಗಳಿಂದ ಕುಟುಂಬ ವೈದ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಸಂಗೀತ, ವಿಜ್ಞಾನ ಸಾಹಿತ್ಯಗಳಲ್ಲಿ ಆಸಕ್ತಿ ಹೊಂದಿದ್ದು, ಇವರು ಕೇವಲ ಡಾಕ್ಟರ್ ಆಗಿರದೆ ಸಾಮಾಜಿಕ ಸಮಸ್ಯೆಗಳಿಗೂ ಸ್ಪಂದಿಸಿದ್ದಾರೆ. ಹವ್ಯಕ ಸಂಘ, ಭಾರತೀಯ ವೈದ್ಯಕೀಯ ಸಂಘ, ಕನ್ನಡ ಸಾಹಿತ್ಯ ಪರಿಷತ್, ವಿಶ್ವೇಶ್ವರಯ್ಯ ವಿಜ್ಞಾನ ಕೇಂದ್ರ, ಕ್ಷೇಮಟ್ರಸ್ಟ್, ಸಂಸ್ಕೃತಿ ಸೌರಭ, ಭೂಮಿಕಾ ವೇದಿಕೆ, ಸಂಜೀವಿನಿ ವೇದಿಕೆ, ಸಂಸ್ಕಾರ ವೇದಿಕೆ – ಹೀಗೆ ಹಲವಾರು ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಉಪನ್ಯಾಸಗಳು ಯುಟ್ಯೂಬ್‌ನಲ್ಲಿ ಪ್ರಸಾರವಾಗಿವೆ. ಇವರ ಲೇಖನಗಳು ಪತ್ರಿಕೆಗಳಲ್ಲಿಯೂ ಪ್ರಕಟಗೊಂಡಿದೆ.

**ಡಾ. ಸಂಧ್ಯಾ ಕಾವೇರಿ:** ಪ್ರಾಂಶುಪಾಲರು, ಮಾನಸ ಟ್ರಸ್ಟನ ಕಟೀಲ್ ಅಶೋಕಪ್ಪೈ ಸ್ಮಾರಕ ಕಾಲೇಜು. ಇವರು ಮೂಲತ: ಮಂಗಳೂರು ಜಿಲ್ಲೆಯ ಬಂಟ್ವಾಳ ತಾಲೂಕಿನ ಮಂಚಿಗ್ರಾಮದವರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ತಮ್ಮ ಗ್ರಾಮದಲ್ಲಿ ಮುಗಿಸಿ, ಪದವಿಯನ್ನುಉಜರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ, ತಮ್ಮ ಸ್ನಾತಕೋತ್ತರ ಶಿಕ್ಷಣವನ್ನು ಸಮಾಜ ಕಾರ್ಯ ಎಂಬ ವಿಷಯದಲ್ಲಿ ಮಂಗಳೂರಿನ ರೋಶನಿ ನಿಲಯದಲ್ಲಿ ಪೂರೈಸಿ ಅಲ್ಲಿಯೇ ಡಾಕ್ಟರೇಟ್ ಪಡೆದರು. 25 ವರ್ಷಗಳಿಗೂ ಹೆಚ್ಚು ಕಾಲ ಆಪ್ತ ಸಮಾಲೋಚಕರಾಗಿ ಸೇವೆ ಸಲ್ಲಿಸಿದ್ದಾರೆ. ಸಂಘ ಸಂಸ್ಥೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಅನೇಕ ವಿಷಯಗಳ ಮೇಲೆ ಉಪನ್ಯಾಸ ನೀಡಿದ್ದಾರೆ. ಜೇಸಿ ಸಂಸ್ಥೆಯಲ್ಲಿ ಔಟ್ ಸ್ಟಾಂಡಿಂಗ್ ಜೇಸಿರೇಟ್ ಪ್ರಶಸ್ತಿ ಪಡೆದಿದ್ದಾರೆ. ರೋಟರಿಯ ಗ್ರೂಪ್ ಸ್ಟಡಿ ಎಕ್ಸ್‌ಚೇಂಜ್ ಪ್ರೋಗ್ರಾಂನಲ್ಲಿ ಒಂದು ತಿಂಗಳು ನ್ಯೂಜಿಲೆಂಡ್‌ಗೆ ತೆರಳಿ ನಮ್ಮ ದೇಶದ ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ. ಇವರ ಸಂಶೋಧನಾ ಪ್ರಬಂಧಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಸ್ತಕಗಳಲ್ಲಿ ಪ್ರಕಟಗೊಂಡಿದೆ.

**ಶ್ರೀ ಅನಿಲ್ ಕುಮಾರ್‌ಎಸ್. ಭೂಮರೆಡ್ಡಿ:** ಹೆಚ್ಚುವರಿ ಸೂಪರಿಂಟೆಂಡ್‌ಆಫ್ ಪೋಲಿಸ್ : 1967 ರಲ್ಲಿ ಜನಿಸಿದ ಇವರು ಕಾಮರ್ಸ್ ಮತ್ತು ಕಾನೂನು ಪದವಿಯನ್ನು ಪಡೆದಿದ್ದಾರೆ. 1994 ರಲ್ಲಿ ಇನ್‌ಸ್ಪೆಕ್ಟರ್ ಆಗಿ ಪೋಲೀಸ್ ಇಲಾಖೆಗೆ ಸೇರಿದ ಇವರು ಚಿಕ್ಕಮಗಳೂರು, ಧಾರವಾಢ, ಬಾಗಲಕೋಟೆ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿ, 4 ವರ್ಷ ಲೋಕಾಯುಕ್ತದಲ್ಲಿ, 1 ವರ್ಷ ಎಕ್ಸೈಸ್‌ಎನ್ ಫೋರ್ಸ್‌ಮೆಂಟ್ ಮತ್ತು ಲಾಟರಿ ಪ್ರಾಹಿಬಿಷನ್ ವಿಂಗ್‌ನಲ್ಲಿ ಕೆಲಸ ಮಾಡಿದ್ದಾರೆ. ರಾಣಿ ಬೆನ್ನೂರಿನಲ್ಲಿ ಡಿ.ಎಸ್.ಪಿ. ಹಾಗೂ ಹುಬ್ಬಳ್ಳಿ ಧಾರವಾಡದಲ್ಲಿ ಎ.ಎಸ್.ಪಿ. ಯಾಗಿ ಸೇವೆ ಸಲ್ಲಿಸಿದ್ದಾರೆ. 5.01.2023 ರಿಂದ ಶಿವಮೊಗ್ಗದಲ್ಲಿ ಹೆಚ್ಚುವರಿ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ವಿಶೇಷ ಸಾಧನೆ ಎಂದರೆ, ಮುಖ್ಯ ಮಂತ್ರಿಗಳಿಂದ ಚಿನ್ನದ ಪದಕ ಹಾಗೂ ಭಾರತದ ರಾಷ್ಟ್ರಪತಿಗಳಿಂದ ಮೆಡಲ್‌ಗಳನ್ನು ಪಡೆದಿದ್ದಾರೆ. ಹಲವಾರು ಕಾರ್ಯಕ್ರಮಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಉಪನ್ಯಾಸ ಮಾಡಿದ್ದಾರೆ.

**ಅಂದಿನ ಕಾರ್ಯಕ್ರಮದ ಮುಖ್ಯಅತಿಥಿ ಹಾಗೂ ಸಾಧಕಿ ಡಾ. ಪವಿತ್ರರವರ ಪರಿಚಯ:**

ಪರಿಶ್ರಮ – ಪ್ರತಿಭೆಗಳೆರಡರ ವಿಸ್ಮಯಕರ ವ್ಯಕ್ತಿತ್ವದ ಡಾ.ಕೆ.ಎಸ್. ಪವಿತ್ರ ವಿಜ್ಞಾನ ಕಲೆಗಳಲ್ಲಿ ಸಮಾನ ಎನ್ನುವ ಸಾಧನೆಗೈದಿರುವವರು. 17 ರ ವಯಸ್ಸಿನಲ್ಲಿಯೇ ವಿದ್ವತ್ ಭರತ ನಾಟ್ಯವನ್ನು ರಾಜ್ಯಕ್ಕೆ 2 ನೇ ರ್‍ಯಾಂಕ್‌ನೊಂದಿಗೆ ಗಳಿಸಿದ ಅಗಾಧ ಪ್ರತಿಭೆ ಇವರದು. ರಾಜ್ಯದ ಹಳೆಯ ಹಾಗೂ ಪ್ರತಿಷ್ಠಿತ ಮೈಸೂರು ಮಹಾವಿದ್ಯಾಲಯದಿಂದ ಎಂ.ಬಿ.ಬಿ.ಎಸ್ ಪದವಿ, ಅಂತರಾಷ್ಟ್ರೀಯ ಖ್ಯಾತಿಯ ನಿಮ್ಹಾನ್ಸ್‌ನಿಂದ ಮನೋವೈದ್ಯಕೀಯ ಪದವಿ. ಈ ಕ್ಷೇತ್ರದಲ್ಲಿ ಹಲವಾರು ಪುರಸ್ಕಾರಗಳು. ವೈದ್ಯೆ ಕಲಾವಿದೆ ನೃತ್ಯ ಸಂಯೋಜಕಿ ಗುರು ಆಯೋಜಕಿ ಸಂಶೋಧಕಿ ಹೀಗೆ ಹಲವು ಪಾತ್ರಗಳಲ್ಲಿ ಡಾ.ಪವಿತ್ರರವರು ತಮ್ಮ ಸಾಮರ್ಥ್ಯವನ್ನು ವಿಸ್ತರಿಸಿದವರು. ಕನ್ನಡದ ಕಾವ್ಯಗಳನ್ನು ನೃತ್ಯ ಕ್ಷೇತ್ರಕ್ಕೆ ಸಾಹಿತ್ಯಕ್ಕೆ ಬೆಸೆಯುತ್ತಾ ಜನಸಾಮಾನ್ಯರಲ್ಲಿ ಗುರುತಿಸಲ್ಪಟ್ಟಿದ್ದಾರೆ.

ಮನೋವೈದ್ಯಕೀಯ ನೃತ್ಯ ಕ್ಷೇತ್ರಗಳ ಬಗೆಗೆ ಅರಿವನ್ನು ಪಸರಿಸುವ ಸಲುವಾಗಿ ಡಾ.ಪವಿತ್ರರವರು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಗಂಭೀರವಾಗಿ ಸಾಹಿತ್ಯ ಕೃಷಿ ಮಾಡುವ ಉದ್ದೇಶದಿಂದ ಅವರು ಕನ್ನಡ ಸಾಹಿತ್ಯದಲ್ಲಿ – ಸಮೂಹ ಸಂವಹನ ಮತ್ತು ಪತ್ರಿಕೋದ್ಯಮಗಳನ್ನು ಎಂ.ಎ.ದಲ್ಲಿ ಅಭ್ಯಸಿಸಿ ಎರಡನೇ ರ್‍ಯಾಂಕ್ ಪಡೆದಿದ್ದಾರೆ. ಹಂಪಿ ವಿಶ್ವ ವಿದ್ಯಾಲಯದ ವಿಜ್ಞಾನ ಇತಿಹಾಸ ವಿಭಾಗದ ಅಧ್ಯಯನ ಮಂಡಳಿಯ ಸದಸ್ಯತ್ವ ಗೌರವ. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ. ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಶಸ್ತಿ, ವೈದ್ಯ ಸಾಹಿತಿ ರಾಜ್ಯ ಪ್ರಶಸ್ತಿ, ಭಾರತ ಸರ್ಕಾರದ ಜೂನಿಯರ್ ಮತ್ತು ಸೀನಿಯರ್ ಮಟ್ಟದ ಫೆಲೋಶಿಪ್‌ಗಳು ಹೀಗೆ ಹಲವಾರು ಪ್ರಶಸ್ತಿ ಹಾಗೂ ಗೌರವಕ್ಕೆ ಭಾಜನರಾಗಿದ್ದಾರೆ ಡಾ. ಪವಿತ್ರರವರು. ❖



## ಸಂಪಾದಕೀಯ

### ನಮ್ಮ ದಾರಿಗೆ ಅಡೆತಡೆ ಯಾರು...!?

ಒಮ್ಮೆ ಒಂದು ದೊಡ್ಡ ಸಂಸ್ಥೆಯಲ್ಲಿ ಬೆಳಗ್ಗೆ ಎಲ್ಲರೂ ಕೆಲಸಕ್ಕೆ ಬಂದಾಗ ಸೂಚನಾ ಫಲಕದ ಮೇಲೆ ಹೀಗೆ ಬರೆದಿತ್ತು. 'ನಿಮ್ಮ ಬೆಳವಣಿಗೆಯನ್ನು ತಡೆಯುತ್ತಿದ್ದ ವ್ಯಕ್ತಿ ಇವತ್ತು ಮೃತಪಟ್ಟಿದ್ದಾರೆ. ಅಂತಿಮ ದರ್ಶನಕ್ಕಾಗಿ ಅವರ ಶರೀರವನ್ನು ಮೊದಲನೆ ಮಹಡಿಯ ಸಭಾಂಗಣದಲ್ಲಿ ಇಡಲಾಗಿದೆ'. ಯಾರು ತೀರಿಕೊಂಡಿರಬಹುದು ಎಂದು ಕುತೂಹಲದಿಂದ ಎಲ್ಲರು ಅವರ ಹೆಸರನ್ನು ತಿಳಿದುಕೊಳ್ಳಲು ಪ್ರಯತ್ನಪಡತೊಡಗಿದರು. ಒಳಹೋಗಿ ನೋಡಿ ಬಂದವರನ್ನು ಕೇಳುವ ಎಂದರೆ ಹೊರಬರುವವರು ಒಳಹೋಗುವವರನ್ನು ಭೇಟಿಯಾಗದಂತೆ ವ್ಯವಸ್ಥೆ ಮಾಡಲಾಗಿತ್ತು. ಪ್ರತಿಯೊಬ್ಬರೂ ದೇಹವನ್ನು ನೋಡಲು ಹೊರಟರು. ಉದ್ದನೆಯ ಸರದಿ ಸಾಲು. ದೂರದಿಂದ ಹೊರಬರುತ್ತಿರುವವರನ್ನು ನೋಡಿದರೆ ಅವರ ಮುಖ ಸಪ್ಪಗಾಗಿತ್ತು. ಅಲ್ಲಿ ಶ್ರೀಧರ ಎನ್ನುವ ಗುಮಾಸ್ತನಿದ್ದ. ಅವನದ್ದು ಯಾವಾಗಲೂ ಬೇರೆಯವರ ಮೇಲೆ ದೂರು. 'ಸದ್ಯ, ನನ್ನ ದಾರಿಗೆ ಅಡ್ಡ ಬಂದವರು ಯಾರೋ ಹೋದರಲ್ಲ, ಒಳ್ಳೆಯದಾಯಿತು' ಎಂದುಕೊಳ್ಳುತ್ತಾ ಒಳಹೋದ. ಒಳಹೋದರೆ ಅಲ್ಲೊಂದು ಶವಪೆಟ್ಟಿಗೆ. ನೋಡಿದರೆ ಅದರೊಳಗೆ ಏನು ಇರಲಿಲ್ಲ. ಬದಲಾಗಿ ಒಂದು ಕನ್ನಡಿ ಇತ್ತು. ಶ್ರೀಧರ ಬಗ್ಗಿ ನೋಡಿದಾಗ ಅದರಲ್ಲಿ ಅವನ ಪ್ರಗತಿಗೆ ಅಡ್ಡಿಯಾಗಿದ್ದವನ ಬಿಂಬ ಕಾಣಿಸಿತು! ಪಕ್ಕದಲ್ಲೊಂದು ಚೀಟಿ ಇತ್ತು. ಅದರ ಮೇಲೆ 'ನಿಮ್ಮ ಬೆಳವಣಿಗೆಯನ್ನು ತಡೆಯುತ್ತಿದ್ದ ವ್ಯಕ್ತಿ ಬೇರೆ ಯಾರೂ ಅಲ್ಲ, ನೀವೇ' ಎಂದು ಬರೆದಿತ್ತು.

ನಮ್ಮೆಲ್ಲರಿಗೂ ಒಮ್ಮೆಯಾದರೂ ನಮ್ಮನ್ನು ಕಂಡರೆ ಆಗದವರು ಯಾರೋ ನಮ್ಮ ಬೆಳವಣಿಗೆಯನ್ನು ತಡೆಯುತ್ತಿದ್ದಾರೆ ಎಂಬ ಭಾವನೆ ಸುಳಿದುಹೋಗಿರುತ್ತದೆ. ಅಥವಾ ನಾವು ಅಂದಿಕೊಂಡಷ್ಟು ಯಶಸ್ವಿಯಾಗದಿರಲು ಬೇರೆ ಯಾರೋ ಕಾರಣ ಎಂದು ಬಲವಾಗಿಯೇ ನಂಬಿಕೊಂಡಿರುತ್ತೇವೆ. ಕೆಲವರಂತೂ ತಮಗೆ ಮಧ್ಯವಯಸ್ಸು ದಾಟಿದರೂ ತಂದೆತಾಯಿಗಳನ್ನು ದೂಷಿಸುತ್ತಲೇ ಇರುತ್ತಾರೆ. ಆದರೆ ಏನೇ ಅಂದರೂ ನಮ್ಮ ಒಳಮನಸ್ಸಿಗೆ ನಮ್ಮೆಲ್ಲಾ ಕ್ರಿಯೆಗಳಿಗೆ, ಅದರ ಪರಿಣಾಮಗಳಿಗೆ ನಾವೇ ಕಾರಣರೆಂಬ ಸತ್ಯ ಗೊತ್ತಿರುತ್ತದೆ.

ನಮ್ಮ ದೃಢ ಸಂಕಲ್ಪ, ಮನೋಬಲ ಗಟ್ಟಿಯಾಗಿದ್ದರೆ ಎಲ್ಲ ಅಡೆತಡೆಗಳೂ ಸುನಾಮಿಯೆದುರಿನ ಪುಟ್ಟ ಗುಡಿಸಲಿನಂತೆ! ಮನುಷ್ಯನನ್ನು ಮನುಷ್ಯನಂತೆಯೇ ಪರಿಗಣಿಸದ ಅವಮಾನ ಅನುಭವಿಸುವ ಅಂಬೇಡ್ಕರ್ ಅವರಿಗೆ ಹೆಜ್ಜೆ ಹೆಜ್ಜೆಗೂ ಅಡೆತಡೆಗಳಿರಲಿಲ್ಲವೇ? ಎಂಟರ ಹರೆಯದಲ್ಲೇ ಪತ್ರಿಕೆ ಹಂಚುತ್ತಿದ್ದ ಅಬ್ದುಲ್ ಕಲಾಂ ಅವರಿಗೆ ಸಮಸ್ಯೆಗಳಿರಲಿಲ್ಲವೇ? ಸಗಣಿ ನೀರನ್ನು ಎರಚಿಸಿಕೊಂಡರೂ ಬಡ ಹೆಣ್ಣುಮಕ್ಕಳಿಗೆ ಪಾಠ ಮಾಡುವುದನ್ನು ಬಿಡದ ಸಾವಿತ್ರಿಬಾಯಿ ಫುಲೆಯವರ ದಾರಿ ಸುಗಮವಾಗಿತ್ತೇ ?

ಮನೆಯ, ಕಚೇರಿಯ ವಾತಾವರಣ ಸರಿಯಿಲ್ಲ, ಜನ ಸರಿಯಿಲ್ಲ ಎನ್ನುವ ಬದಲು ನಮ್ಮ ಬಲಹೀನತೆಯನ್ನು ತಿಳಿದುಕೊಳ್ಳುವುದು ಮತ್ತು ಅದು ಹೇಗೆ ನಮ್ಮನ್ನು ಮುಂದುವರೆಯದಂತೆ ತಡೆಯುತ್ತಿದೆ ಎಂಬುದನ್ನು ಅರಿತುಕೊಂಡು ಸರಿಪಡಿಸಿಕೊಳ್ಳುವುದು ಸಾಧನೆಯೆಡೆಗಿನ ಮೊದಲ ಹೆಜ್ಜೆ.

• ರೊ. ಎಂ. ಮಾಧವಾಚಾರ್







ಉಡುಪಿಯಲ್ಲಿ ಏರ್ಪಡಿಸಿದ್ದ ನವೋತ್ಸವ ಜಿಲ್ಲಾ ಸಮ್ಮೇಳನಕ್ಕೆ ನಮ್ಮ ಕ್ಲಬ್‌ನಿಂದ 37 ಸದಸ್ಯರು ಭಾಗವಹಿಸಿದ್ರು. ಉಚಿಲದಲ್ಲಿರುವ ಮಹಾಲಕ್ಷ್ಮೀ ದೇವಸ್ತಾನ ಹಾಗೂ ವರಂಗದಲ್ಲಿ ಕೆರೆಯ ಮಧ್ಯ ಇರುವ ಜೈನ ಬಸದಿ ವೀಕ್ಷಿಸಲಾಯಿತು.

## Happy Birthday Wishes



Dilip Venkata Sastry
30th Jan



Madhavachar M.
03rd Feb




K.S.Shailin
03rd Feb

## ಚಿಂತನ

- ಒಬ್ಬರ ಒಳ್ಳೆಯತನವನ್ನು ಗುರುತಿಸಲು ನಮ್ಮಲ್ಲಿಯೂ ಒಳ್ಳೆಯತನ ಇರಬೇಕು.
- ಮತ್ತೊಬ್ಬರ ಜಾಣ್ಮೆಯನ್ನು ಪ್ರಶಂಸಿಸಲು ಪ್ರಬುದ್ಧತೆ ಇರಬೇಕು.
- ಮತ್ತೊಬ್ಬರ ಪ್ರಗತಿಗೆ ಪ್ರೋತ್ಸಾಹಿಸಲು ನಿಷ್ಕಲ್ಮಶ ಮನಸ್ಸೊಂದು ಬೇಕು.
- ಇನ್ನೊಬ್ಬರ ಸಂತೋಷವನ್ನು ಆಸ್ವಾದಿಸಲು ಮಗುವಿನಂತಹ ಮುಗ್ಧತೆ ಇರಬೇಕು.
- ಇನ್ನೊಬ್ಬರನ್ನು ನಮ್ಮವರು ಎಂದುಕೊಳ್ಳಲು ನಿಸ್ವಾರ್ಥ ಭಾವ ಒಂದು ಬೇಕು.

– ರೊ. ಕೆ. ಸೂರ್ಯನಾರಾಯಣ ಉಡುಪ




**RAHLA** ಇದು ಒಂದು ದಿನದ ಕಾರ್ಯಕ್ರಮ ಈ ತಿಂಗಳ 16 ರಂದು ಕಾಸ್ಮೋಕ್ಲಬ್‌ನಲ್ಲಿ ನಡೆಯುತ್ತದೆ. **1) KNOW YOUR POTENTIAL 2) HARMONY IN LIFE 3) LEADING IS OUR DUTY** ಎಂಬ ವಿಷಯಗಳ ಬಗ್ಗೆ ವಿಶೇಷ ಉಪನ್ಯಾಸ ಇರುತ್ತದೆ.

ಈ ಕಾರ್ಯಕ್ರಮಕ್ಕೆ ರೋಟರಿ ಸದಸ್ಯರು ತಮ್ಮ ಕುಟುಂಬದ ಸದಸ್ಯರೊಂದಿಗೆ ನೋಂದಣಿ ಮಾಡಿಸಿ. ರೋಟರಿ ಸದಸ್ಯರಿಗೆ ನೋಂದಣಿ ಶುಲ್ಕ ರೂ. 750/– ಹಾಗೂ ಆನ್ಸ್ ಮತ್ತು ಮಕ್ಕಳಿಗೆ, ರೋಟರ್ಯಾಕ್ಟ್ ಸದಸ್ಯರಿಗೆ ರೂ. 300/–

To,

*Book Post*